# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

## ಮಲ್ಲೇಶ್ವರಂ, ಬೆಂಗಳೂರು - 560003

**KARNATAKA SCHOOL EXAMINATION AND ASSESSMENT BOARD**

**Malleshwaram, Bangaluru – 560003**

**ಮೌಲ್ಯಾಂಕನ – ಮಾರ್ಚ್ 2024 - ಮಾದರಿ ಪ್ರಶ್ನೋತ್ತರ ಪತ್ರಿಕೆ**

**ತರಗತಿ : 8** **ವಿಷಯ – ಪ್ರಥಮ ಭಾಷೆ ಕನ್ನಡ** **ಅಂಕಗಳು - 50**

**ಸಮಯ - 2 ಗಂಟೆ 30 ನಿಮಿಷ**

**ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಶಿವಮೊಗ್ಗ ತಾ ಶಿವಮೊಗ್ಗ**

---

ವಿದ್ಯಾರ್ಥಿಗಳು ಭರ್ತಿ ಮಾಡಬೇಕಾಗಿರುವ ಮಾಹಿತಿ

ವಿದ್ಯಾರ್ಥಿಯ ಹೆಸರು : -----------------------------------------------------------------------

ವಿದ್ಯಾರ್ಥಿಯ **SATS** ಸಂಖ್ಯೆ :

| | | | | | | | | |
|---|---|---|---|---|---|---|---|---|
| | | | | | | | | |

ವಿದ್ಯಾರ್ಥಿಯ ಸಹಿ : ------

ಶಾಲೆಯ ಡೈಸ್ ಕೋಡ್

| | | | | | | | | | | |
|---|---|---|---|---|---|---|---|---|---|---|
| | | | | | | | | | | |

ಕ್ಲಸ್ಟರ್ : ---------------------- ಬ್ಲಾಕ್ : ---------------------- ಜಿಲ್ಲೆ : --------------------

ಶಾಲೆಯ ವಿಧ : ಸರ್ಕಾರಿ ☐ ಅನುದಾನಿತ ☐ . ಅನುದಾನ ರಹಿತ ☐

ಕೊಠಡಿ ಮೇಲ್ವಿಚಾರಕರ ಸಹಿ --------------------------------

ಮೌಲ್ಯಮಾಪನ ಸಮಯದಲ್ಲಿ ಶಿಕ್ಷಕರು ಭರ್ತಿ ಮಾಡಬೇಕಾದ ಮಾಹಿತಿ

| ಪ್ರಶ್ನೆ ಸಂಖ್ಯೆ | ಪಡೆದ ಅಂಕಗಳು | ಪ್ರಶ್ನೆ ಸಂಖ್ಯೆ | ಪಡೆದ ಅಂಕಗಳು | ಪ್ರಶ್ನೆ ಸಂಖ್ಯೆ | ಪಡೆದ ಅಂಕಗಳು |
|---|---|---|---|---|---|
| 1 | | 11 | | 21 | |
| 2 | | 12 | | 22 | |
| 3 | | 13 | | 23 | |
| 4 | | 14 | | 24 | |
| 5 | | 15 | | 25 | |
| 6 | | 16 | | 26 | |
| 7 | | 17 | | 27 | |
| 8 | | 18 | | 28 | |
| 9 | | 19 | | 29 | |
| 10 | | 20 | | 30 | |
| | | 0 | | 31 | |

ಒಟ್ಟು ಗಳಿಸಿದ ಅಂಕಗಳು (ಅಕ್ಷರಗಳಲ್ಲಿ) -----------------------------------------------------

ಮೌಲ್ಯಮಾಪಕರ ಸಹಿ : ----------------------------

**I.** 1 ರಿಂದ 9 ರವರೆಗಿನ ಪ್ರಶ್ನೆಗಳಿಗೆ ನೀಡಲಾಗಿರುವ ನಾಲ್ಕು ಆಯ್ಕೆಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ನಿಗದಿಪಡಿಸಿರುವ ಸ್ಥಳದಲ್ಲಿ ಕ್ರಮಾಕ್ಷರದೊಂದಿಗೆ ಉತ್ತರವನ್ನು ಬರೆಯಿರಿ. **(9 X 1 = 9)**

1. **ಬೆಂಗಳೂರು ಒಂದು ಹೆಸರಾಂತ ನಗರವಾಗಿದೆ. – ಈ ವಾಕ್ಯದಲ್ಲಿ 'ಬೆಂಗಳೂರು' ಪದವು –**

   A) ರೂಢನಾಮ B) ಅಂಕಿತನಾಮ

   C) ಭಾವನಾಮ D) ಅನ್ವರ್ಥನಾಮ

2. **ಙ, ಞ, ಣ, ನ, ಮ – ಈ ಅಕ್ಷರಗಳು,**

   A) ಸ್ವರಾಕ್ಷರಗಳು B) ಅನುನಾಸಿಕಾಕ್ಷರಗಳು

   C) ಅಲ್ಪಪ್ರಾಣಾಕ್ಷರಗಳು D) ಮಹಾಪ್ರಾಣಾಕ್ಷರಗಳು

3. **ಸರ್ ಎಂ ವಿಶ್ವೇಶ್ವರಯ್ಯ ಅವರು ಮೈಸೂರು ರಾಜ್ಯದ ಪರಮೋಚ್ಚ ಅಧಿಕಾರ ಹಿಡಿದಿದ್ದರು. ಈ ವಾಕ್ಯದಲ್ಲಿ ಗುಣಸಂಧಿಗೆ ಉದಾಹರಣೆ.**

   A) ಪರಮೋಚ್ಚ B) ಮೈಸೂರು

   C) ಅಧಿಕಾರ D) ಹಿಡಿದಿದ್ದರು.

4. **ಎಲ್ಲರೂ ಸುರಹೊನ್ನೆ ತೋಟಕ್ಕೆ ಹೋದರು. ಈ ವಾಕ್ಯದಲ್ಲಿ 'ತೋಟಕ್ಕೆ' ಪದದಲ್ಲಿರುವ ವಿಭಕ್ತಿ.**

   A) ಪ್ರಥಮ B) ದ್ವಿತೀಯ

   C) ತೃತೀಯ . D) ಚತುರ್ಥಿ

5. **"ಅನಿಷ್ಟ ಮಗ್ಗದ ಹೆಸರೆತ್ತಬೇಡಿ" ಈ ವಾಕ್ಯದಲ್ಲಿ ಬಳಸಿರುವ ಲೇಖನ ಚಿಹ್ನೆ.**

   A) ಉದ್ಧರಣ ಚಿಹ್ನೆ B) ಆವರಣ ಚಿಹ್ನೆ

   C) ಪೂರ್ಣವಿರಾಮ ಚಿಹ್ನೆ D) ವಾಕ್ಯವೇಷ್ಟನ ಚಿಹ್ನೆ

6. **ಊರಿನ ಹೊರಗೆ ಒಂದು ಹೆಮ್ಮರ ಬಿರುಗಾಳಿಯ ಹೊಡೆತಕ್ಕೆ ಬಲಿಯಾಗಿತ್ತು. ಇಲ್ಲಿ 'ಹೆಮ್ಮರ' ಪದವು ಈ ಸಮಾಸವಾಗಿದೆ.**

   A) ತತ್ಪುರುಷ B) ದ್ವಿಗು

   C) ಕರ್ಮಧಾರೆಯ D) ದ್ವಂದ್ವ

7. **ನಾಲ್ಕು ಸಾಲುಗಳುಳ್ಳ ಪದ್ಯವನ್ನು ಹೀಗೆಂದು ಕರೆಯುವರು.**

   A) ತ್ರಿಪದಿ B) ಚೌಪದಿ

   C) ದ್ವಿಪದಿ D) ಷಟ್ಪದಿ

8. **'ಕೋಗಿಲೆ' ಪದದ ತದ್ಭವರೂಪ.**

   A) ಕೋಕಿಲ B) ಸಂಕಿಲಾ

   C) ಕೋಕಿಲೆ D) ಕೊಕಿಲಾ

9. **'ಉಡುರಾಜ' ಪದದ ಅರ್ಥ.**

   A) ಸೂರ್ಯ B) ಚಂದ್ರ

   C) ನಕ್ಷತ್ರ D) ಮಂತ್ರಿ

**II.** ಈ ಕೆಳಗಿನ ಗದ್ಯ/ಪದ್ಯದ ಭಾಗಗಳನ್ನು ಓದಿ, ಗ್ರಹಿಸಿಕೊಂಡು ನೀಡಿರುವ ಪ್ರಶ್ನೆಗಳಿಗೆ ಸೂಕ್ತವಾದ ಉತ್ತರ ಆರಿಸಿ ಕ್ರಮಾಕ್ಷರದೊಂದಿಗೆ ಉತ್ತರಿಸಿ. **(7 X 1 = 7)**

10. **ನಾನೆಷ್ಟು ಉಪಚಾರ ಮಾಡಿದರೂ ನನ್ನ ತಮ್ಮ ಮಾತನಾಡಲಿಲ್ಲ. ಕಡೆಗೆ ಯೋಚಿಸಿ ಚೆಲುವೆಯರಾದ ದಾಸಿಯರನ್ನು ಸೇವೆಗೆ ಕಳುಹಿಸಿದಳು ದೊರೆಮಗನ ಅಕ್ಕ. ಇಲ್ಲಿ ದೊರೆ ಮಗ ತನ್ನ ಅಕ್ಕನ ಜೊತೆ ಮಾತನಾಡದಿರಲು ಕಾರಣ.**

    A) ಅಕ್ಕನ ಮೇಲಿನ ಸಿಟ್ಟಿಗಾಗಿ B) ಹೆಂಡತಿ ನೆನಪಿಗಾಗಿ

    C) ಚಲುವೆಯರು ಸೇವೆ ಮಾಡಲಿ ಎಂದು D) ಅವನು ಮೂಗನಾಗಿದ್ದರಿಂದ

11. **ಜೈನರಾದ ಪೂಜ್ಯಪಾದ ಕೊಂಡಕುಂದವರ್ಯರ,**

**ಮಧ್ವಯತಿಯ ಬಸವಪತಿಯೆ ಮುಖ್ಯ ಮತಾಚಾರ್ಯರ**

**ಈ ಪದ್ಯದಲ್ಲಿ ಕವಿ ಯಾರನ್ನು ಸ್ಮರಿಸಿದ್ದಾರೆ.**

A) ಕನ್ನಡ ವಿಜ್ಞಾನಿಗಳು B) ಕನ್ನಡ ಕ್ರೀಡಾಪಟುಗಳು

C) ಕನ್ನಡ ಮತಾಚಾರ್ಯರು D) ಕನ್ನಡ ರಾಜರು

12. **ಈತನೀಗ ನಮ್ಮ ದೇವನು**

**ಪ್ರೀತಿಯಿಂದಲಿ ಸ್ಮರಿಸುವವರ । ಪಾತಕಗಳ ಪರಿಹರಿಪ**

**ಈ ಪದ್ಯದಲ್ಲಿ ದೇವನು ಇವರ ಪಾತಕಗಳನ್ನು ಪರಿಹರಿಸುತ್ತಾನೆ.**

A) ದೇವರಿಗೆ ನಮಿಸುವವರ B) ಪ್ರೀತಿಯಿಂದ ಸ್ಮರಿಸುವವರ

C) ಕೆಲಸ ಮಾಡುವವರ D) ಅಡ್ಡದಾರಿ ಹಿಡಿದವರ

13. **ಕೋಟೆಗೋಡೆಗೆ ನಮ್ಮ ಹೆಣಗಳೇ ಮೆಟ್ಟಿಲು,**

**ನಮ್ಮ ಸಾವೇ ನೋವೆ ಹೊಸನಾಡ ತೊಟ್ಟಿಲು**

**ಈ ಪದ್ಯದಲ್ಲಿ ಯಾರನ್ನು ತಮ್ಮ ಮೆಟ್ಟಿಲುಗಳನ್ನಾಗಿ ಮಾಡಿ ಹೊಸನಾಡ ಕಟ್ಟಲು ಬಯಸಿದ್ದಾರೆ.**

A) ಗೋಡೆಗಳು B) ತೊಟ್ಟಿಲುಗಳು

C) ಸಾವುನೋವು D) ತಮ್ಮ ಹೆಣಗಳು

14. **ನನ್ನ ದೇಹದ ಬೂದಿ-ಕೊಳದಲಿ ಬೀಗಿ ಬಿಡಿ**

**ತಾವರೆಯು ದಿನವೂ ಅರಳುವಲ್ಲಿ;**

**ಬೂದಿ ಕೆಸರನು ಕೂಡಿ ಹೊಸ ಪಂಕಜವು ಮೂಡೆ,**

**ಈ ಪದ್ಯದಲ್ಲಿ ಹೊಸ ಪಂಕಜ ಅಂದರೆ**

A) ಕೊಳದ ಕೆಸರಲ್ಲಿ ಹುಟ್ಟುವ ಹೊಸ ತಾವರೆ B) ಕೆರೆಯಲ್ಲಿ ಹುಟ್ಟುವ ಹಳೆ ಕಮಲ

C) ನದಿಯಲ್ಲಿ ಅರಳಿದ ಕಮಲ D) ಸಮುದ್ರದಲ್ಲಿ ಹುಟ್ಟುವ ಕಮಲ

15. **ಅಂದಿನ ರಾತ್ರಿ ಎಲ್ಲರೂ ಮಲಗಿದ ಮೇಲೆ ನಾನು ಹೊರಗೆ ಹೊರಟೆ. ನನ್ನ ಮನಸ್ಸು ಸಿಟ್ಟಿನಿಂದ ಚಂಚಲವಾಗಿತ್ತು. ಆ ಹುಡುಗಿಯನ್ನು ಮದುವೆಯಾಗುವ ಇಚ್ಛೆ ನನಗೆ ಸ್ವಲ್ಪವೂ ಇರಲಿಲ್ಲ.**

**ಯುವಕನು ಆ ಹುಡುಗಿಯನ್ನು ಮದುವೆ ಆಗದಿರಲು ಕಾರಣ.**

A) ಹುಡುಗಿ ಸುಂದರಿ ಅಲ್ಲದಿರುವುದು B) ಹುಡುಗಿಯ ಮನೆಯವರು ಶ್ರೀಮಂತರಾಗಿದ್ದು. C) ಹುಡುಗಿಯ ಮನೆಯವರು ಬಡವರಾಗಿದ್ದು D) ಯುವಕನಿಗೆ ಮದುವೆ ಆಗಲು ಆಸಕ್ತಿ ಇಲ್ಲದ್ದು

16. **ನೆಹರು ಅವರು ತಮ್ಮ ಮಗಳಿಗೆ ನೀನು ರಹಸ್ಯದಲ್ಲಿ ಕೆಲಸ ಮಾಡಿದರೆ ನಿನಗೆ ಹಿಗಾಗಿದೆ ಎಂದರ್ಥ ಎಂದರು.**

A) ಖುಷಿ ಇದೆ ಎಂದರ್ಥ B) ಭಯವಿದೆ ಎಂದರ್ಥ

C) ಬೇಸರವಿದೆ ಎಂದರ್ಥ D) ನೋವಿದೆ ಎಂದರ್ಥ

**III. ಈ ಕೆಳಗಿನ ಗದ್ಯ/ಪದ್ಯಗಳನ್ನು ಓದಿಕೊಂಡು ಆಯಾಯ ಗದ್ಯ/ಪದ್ಯದ ಕೆಳಗೆ ನೀಡಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.**

**(4 X 1 = 4)**

17. ಹುಡುಗ ಕರೀಮ್ ಮಗ್ಗದ ಕೆಲಸವನ್ನು ಮೀನು ನೀರಿನಲ್ಲಿ ಈಜುವಷ್ಟೇ ಸುಲಭವಾಗಿ ಕಲಿತು ಬಹು ನಿಪುಣನಾಗಿಬಿಟ್ಟ. ಅವನ ತಂದೆಗೆ ರೋಷ ಉಕ್ಕಿ ಬಂತು. ಮುಖ್ಯೋಪಾಧ್ಯಾಯ ಶಂಕರಪ್ಪ ಅವರೊಡನೆ ನಿಷ್ಠುರವಾಗಿ ಜಗಳವಾಡಿದ್ದನು.

**ಈ ಗದ್ಯ ಭಾಗದಲ್ಲಿ ಹೇಳಿದಂತೆ ಕರೀಮನ ತಂದೆಗೆ ಸಿಟ್ಟು ಬರಲು ಕಾರಣವೇನು?**

18. ವಿಶ್ವೇಶ್ವರಯ್ಯ ಅವರು ದಿವಾನರಾಗಿದ್ದ ಕಾಲ. ಡಿ.ವಿ.ಜಿ ಆಗ ಯುವ ಪತ್ರಕರ್ತ.ದಸರಾ ಉತ್ಸವ ಬಂತು. ರಾಜ್ಯದ ಎಲ್ಲಾ ಪತ್ರಿಕೆಗಳೂ ಅದರ ವಿಶೇಷ ವರದಿ ನೀಡಿದವು.

**ವಿಶ್ವೇಶ್ವರಯ್ಯ ಅವರು ಮೈಸೂರು ಸರ್ಕಾರದಲ್ಲಿ ಅಲಂಕರಿಸಿದ ಹುದ್ದೆ ಯಾವುದು?**

19. ಕೈಯಲ್ಲ ಕಾಸಾಡದ ಆ ಕಾಲದಲ್ಲಿ ಹಲವು ಸಾರಿ ಮನೆಯಲ್ಲಿ ಎಲ್ಲರಿಗೂ ಕಾಫಿ ಮಾಡುವಷ್ಟು ಅನುಕೂಲ ಇರುತ್ತಿರಲಿಲ್ಲ. ಕೆಲವೊಮ್ಮೆ ಅಮ್ಮ ಸ್ವಲ್ಪ ಕಾಫಿಪುಡಿಯಲ್ಲಿ ಒಂದು ಲೋಟ ಕಾಫಿ ಮಾಡಿ ಅಪ್ಪನಿಗೆ ಕೊಟ್ಟು ಆ ಕಾಫಿ ಮಾಡಿದ ಚರಟದಲ್ಲಿ ನನಗೆ, ತನಗೆ ನನ್ನಜ್ಜನಿಗೆ ಕೊಡುತ್ತಿದ್ದರು.

**ಎಲ್ಲರಿಗೂ ಕಾಫಿ ನೀಡದಿರಲು ಕಾರಣವೇನು?**

20. ನಾಡಿನೆಲ್ಲ ಗಡಿಗಳಲ್ಲಿ ಬಾನಿನಲ್ಲಿ ಕಡಲಿನಲ್ಲಿ

ನಮ್ಮ ಯೋಧರೆತ್ತಿ ಹಿಡಿದ ನಮ್ಮ ಧ್ವಜದ ನೆರಳಿನಲ್ಲಿ

**ಈ ಪದ್ಯದಲ್ಲಿ ಕಂಡಂತೆ ನಮ್ಮ ಧ್ವಜವನ್ನು ಎತ್ತಿ ಹಿಡಿದವರಾರು?**

IV. **ಈ ಕೆಳಗಿನ ಗದ್ಯ/ಪದ್ಯಗಳನ್ನು ಓದಿಕೊಂಡು ಆಯಾಯ ಗದ್ಯ/ಪದ್ಯಗಳ ಕೆಳಗೆ ನೀಡಿರುವ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ.**

**(6 X 2 = 12)**

21.



**ಈ ಚಿತ್ರವನ್ನಾಧರಿಸಿ ಹೋಟೆಲ್ ಗಳಲ್ಲಿ ನಡೆಯುವ ಸಂಸ್ಕೃತಿಯನ್ನು ವಿವರಿಸಿ.**

22. ಯಶೋಧರೆ : ಪೂರ್ವದಲಿ ಗಾರ್ಗಿ ಸಂನ್ಯಾಸದಲಿ ತನ್ನ ಪತಿಯೊಡನೆ ಕಾನನಕೆ ತೆರಳಿದಳು ಎಂದು ಕೇಳಿಹೆನು. ನಾನಂತೆಯೇ ಸಂನ್ಯಾಸವನು ಕೊಂಡು ಪತಿಯೆಡನೆ ಸಾರಿಧರೆ....

ರಾಜ : ಈಗ ನೀನಿಹ ರೀತಿ ಸಂನ್ಯಾಸವಲ್ಲವೇ?

**ರಾಜನು ಈಗ ನೀನಿರುವ ರೀತಿ ಸಂನ್ಯಾಸವಲ್ಲವೆ ಎನ್ನಲು ಕಾರಣವೇನು?**

23. ಮುದ್ದಣ : (ಮುಗುಳ್ನಗೆಯಿಂದ) ಏಂ! ಎಮ್ಮವರೊಂದಿರಕೆ ನಗುವಾ? ಆ! ಎಮ್ಮನ್ನರಪ್ಪ ಕಬ್ಬಿಗರ್ಗೇಂ ಕೊಱತೆಯೊ! ತಮ್ಮೊಂದೆ ನುಡಿಯ ಬಲ್ಪಿಂ ಮೂಜಗಮುಮನಟೆಯಿಸುವಪೊಗಟ್ಟಿ ಕೊಳ್ವಾಳ್ವ ತಾಳ್ವ ತೂಳ್ವ ಪೂಟ್ವಿ ಪೇಟ್ವಿ ಬಾಟ್ವಿ ಸಿಂಗರದ ಬಣ್ಣಗಬ್ಬಿಗರೆಮ್ಮತೆಱನನಿನ್ನುಂ ನೀನಱಿಯಯ್.

**ಈ ಸಂಭಾಷಣೆಯಲ್ಲಿ ಕವಿಗಳಿಗೆ ಒಲಿದಿರುವ ಮಂತ್ರದ ಮಹಿಮೆಯನ್ನು ಮುದ್ದಣ ಹೇಗೆ ವಿವರಿಸಿದ್ದಾನೆ.**

24. "ಕುಹೂ! ಕುಹೂ!" – ಕೋಕಿಲವಾಣಿ

ಜಗ ಜುಮ್ಮೆಂದುದು ಅದ ಕೇಳಿ!

ನೀರವ ಪರ್ವತ ಕಾನನ ಶ್ರೇಣಿ

ಮರುದನಿಗೈದಿತು ಮುದ ತಾಳಿ

**ಈ ಪದ್ಯದಲ್ಲಿನ ಕೋಗಿಲೆಯ ಧ್ವನಿ ಕೇಳಿ ಪ್ರಕೃತಿಯು ಹೇಗೆ ಸ್ಪಂದಿಸಿತು.**

25. ಕ್ಷಿತಿಯಮರರುಪನಯನದಲಿ ಸ

ವ್ರತ ಸುಭೋಜನ ಪರಮ ಮಂತ್ರಾ

ಕ್ಷತೆಗಳಲಿ ಶುಭಶೋಭನದಲಾರತಿಗೆ ಹಿರಿಯರಲಿ

ಕ್ರತುಗಳೆಡೆಯೊಳಗರಮನೆಯಲಿ

ಪ್ರತಿದಿನವು ರಂಜಿಸುತ ದೇವರಿ

ಗತಿಶಯದ ನೈವೇದ್ಯ ತಾನಿಹನೆಂದನಾ ವ್ರಿಹಿಗ

**ಈ ಪದ್ಯದಲ್ಲಿ ವ್ರಿಹಿಯನ್ನು ಯಾವಯಾವ ಮಂಗಳ ಕಾರ್ಯಗಳಲ್ಲಿ ಬಳಸಲಾಗುತ್ತದೆ?**

26. ಆಟೋರಿಕ್ಷ ಹತ್ತುವುದಕ್ಕಿಂತ ಮುಂಚೆ "ಸ್ವಲ್ಪ ನಿಧಾನವಾಗಿ ಓಡಿಸಪ್ಪ, ಇನ್ನೂ 50 ಪೈಸೆ ಜಾಸ್ತಿ ಕೊಡ್ತೇನೆ. ನನಗೆ ವಯಸ್ಸಾಗಿದೆ, ಎತ್ತಿ ಹಾಕುವುದನ್ನು ತಡೆದುಕೊಳ್ಳಲಾಗುವುದಿಲ್ಲ" ಅಂತಾ ಒಮ್ಮೆ ಅಂದೆ. " ರೀ ಸ್ವಾಮಿ, ಸುಮ್ಮನೆ ಕುಳಿತುಕೊಳ್ಳಿ ನಿಮ್ಮಂತವರಿಂದಲೇ ಆಕ್ಸಿಡೆಂಟ್ ಆಗುವುದು. ಹತ್ತುವುದಕ್ಕಿಂತ ಮುಂಚೆನೇ ಅಪಶಕುನ" ಎಂದು ಸಿಡುಕಿದ.

ಈ ಗದ್ಯದಲ್ಲಿ ಕಂಡಂತೆ ಆಟೋ ಚಾಲಕ ಸಿಡುಕಿನಿಂದ ಹೇಳಿದ ಮಾತುಗಳಾವುವು?

**V. ಈ ಕೆಳಗೆ ಕೊಟ್ಟಿರುವ ಗದ್ಯ ಪದ್ಯಗಳನ್ನು ಓದಿ ಅರ್ಥೈಸಿಕೊಂಡು ಆಯಾಯ ಗದ್ಯ ಪದ್ಯಗಳ ಕೆಳಗೆ ನೀಡಿರುವ ಪ್ರಶ್ನೆಗಳಿಗೆ ಸಂದರ್ಭ ಸಹಿತ ಸ್ವಾರಸ್ಯ ಬರೆಯಿರಿ.** **(1 X 3 = 03)**

27. 1950ನೆಯ ಇಸವಿ ಅಕ್ಟೋಬರ್ ತಿಂಗಳು ಮಂಗಳವಾರ 20ನೆಯ ತಾರೀಖು, ಶಿವನ ಸಮುದ್ರದ ಪ್ರವಾಸಿಗರ ನಿಲ್‌ಮನೆಯಲ್ಲಿ ಕುಳಿತುಕೊಂಡು ಈ ದಿನದ ಪಯಣದ ವಿವರ ಬರೆಯುತ್ತಿದ್ದೇನೆ. ಈಗ ರಾತ್ರಿ ಹನ್ನೆರಡು ಹೊಡೆದು ಹದಿನೈದು ನಿಮಿಷವಾಗಿದೆ. ಸುತ್ತಣ ಲೋಕವೆಲ್ಲ ಮಲಗಿಕೊಂಡಿದೆ. ನನ್ನ ಬಳಿ ಈ ತಂಗು ಮನೆಯಲ್ಲಿ ನನ್ನ ಗೆಳೆಯರು, ಕನ್ನಡದ ಯಾತ್ರಿಕರು ಮಲಗಿಕೊಂಡಿದ್ದಾರೆ. ಇಂದು ದಿನವೆಲ್ಲ ಅಲೆದು ಅವರು ದಣಿದು ನಿದ್ರೆ ಹೋಗಿದ್ದಾರೆ.

ಸಂದರ್ಭ : "ಸುತ್ತಣ ಲೋಕವೆಲ್ಲ ಮಲಗಿಕೊಂಡಿದೆ"

**VI. ಈ ಕೆಳಗಿನ ಕವಿಯ ಸ್ಥಳ, ಕಾಲ, ಕೃತಿಗಳು ಬಿರುದುಗಳ ಕುರಿತು ವಾಕ್ಯರೂಪದಲ್ಲಿ ಪರಿಚಯ ಬರೆಯಿರಿ.** **( 1 X 3 = 3 )**

28. **ಅಲ್ಲಮಪ್ರಭು**

ಸುಳಿವುಗಳು : ಶಿವಮೊಗ್ಗ, ಗುಹೇಶ್ವರಾ, ಬಳ್ಳಿಗಾವೆ, 12ನೇ ಶತಮಾನ, ಶೂನ್ಯಪೀಠ, ತತ್ವಜ್ಞಾನಿ, ಸುಜ್ಞಾನಿ, ನಿರಹಂಕಾರ, ಸತ್ಯಶೋಧನೆ, ಶಿವಶರಣ,ಅನುಭಾವಿ.

**VII. ಈ ಕೆಳಗೆ ಕೊಟ್ಟಿರುವ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಸಮನ್ವಯಗೊಳಿಸಿ ಬರೆಯಿರಿ.** **( 1 X 3 = 3 )**

29. ಬಿರುಗಾಳಿಗೆ ತುತ್ತಾದ ಮರಗಿಡಗಳು ಬೀಳುವಂತೆ ಭರತಕುಲದ ನೂರೈವರು ಬಾಲಕರು ಬಿದ್ದರು.

**VIII. ಈ ಕೆಳಗಿನ ಪದ್ಯದ ಮೌಲ್ಯಮಾಪನವನ್ನಾಧರಿಸಿ ಸಾರಾಂಶ ಬರೆಯಿರಿ.** **( 1 X 4 = 4 )**

30. ಅತಿ ಗಂಭೀರನುದಾರ ಧೀರನು ಮಹಾ ಸಂಪನ್ನ ಸತ್ಯಾತ್ಮನೂ

ರ್ಜಿತ ನಾನಾಲಿಪಿಭಾಷೆಯೊಳ್ ಪರಿಚಿತಂ ಲಂಚಕ್ಕೆ ಕೈನೀಡದಂ

ವ್ರತ,ಸದ್ಧರ್ಮ, ವಿಚಾರಶಾಲಿ ಚತುರೋಪಾಯಂಗಳಂ ಬಲ್ಲವಂ

ಪತಿಕಾರ್ಯಂವರ ಮಂತ್ರಿಯೈ ಹರಹರಾ ಶ್ರೀಚೆನ್ನಸೋಮೇಶ್ವರಾ

IX.

31. ನಿಮ್ಮನ್ನು ದಾವಣಗೆರೆ ಜಿಲ್ಲೆ ಹರಿಹರ ತಾಲ್ಲೂಕಿನ ಹಲುವಾಗಿಲು ನ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ ಬಸವರಾಜ್/ವಿನೋದ ಎಂದು ಭಾವಿಸಿಕೊಂಡು ನಿಮ್ಮೂರಿನ ರಸ್ತೆ ಮಾಡಿಸಿಕೊಡಲು ಕೋರಿ ತಾಲ್ಲೂಕು ಪಂಚಾಯತಿ ಅಧ್ಯಕ್ಷರಿಗೆ ಒಂದು ಮನವಿ ಪತ್ರ ಬರೆಯಿರಿ.

**( 1 X 5 = 5 )**